ಡಾ. ಜಾಜಿ ದೇವೇಂದ್ರಪ್ಪ ಬಳ್ಳಾರಿ ಜಿಲ್ಲೆಯ ಯಳ್ಳಾರ್ತಿಯವರು. 'ನಬೆಡಗು', 'ವಿಜಲುಗಳು', 'ಶ್ರೀಶೈಲ ಶಾಸನ ಸಮೀಕ್ಷೆ', 'ಆಂಧ್ರರು ಚಿತ್ರಿಸಿದ ಬಸವಣ್ಣ', 'ಶ್ರೀಶೈಲ ಪರಿಸರ ಸಾಂಸ್ಕೃತಿಕ ಅಧ್ಯಯನ', 'ಹಿಂದೂ ಧರ್ಮೋತ್ತರ ಭಾರತ', 'ಹೊಳಲಗುಂದಿ ಸಾಯಿಬಣ್ಣ ತಾತನವರ ತತ್ವಪದಗಳು', 'ತಿಳಿದಷ್ಟೇ ಬಯಲು', 'ನುಡಿಗೆ ಕೇಡಿಲ್ಲವಾಗಿ' ಅವರ ಕೆಲವು ಕೃತಿಗಳು. ಪ್ರಸ್ತುತ ಗಂಗಾವತಿಯಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕರು.

ಕೆಳಗೆ ಲಿಂಗೈಕ್ಯ ಚನ್ನಬಸಪ್ಪ ಎಂಬ ಬರಹ. ಈರಮ್ಮ ಸಣ್ಣ ಪದ ಹಾಡಬೇಕೆಂದುಕೊಂಡು, ಬೀಸುಕಲ್ಲಿನ ಒಡಲಿಗೆ ಹುರುಳಿತುಂಬಿ ಒಮ್ಮೆ ಆ ಫೋಟೋ ದಿಟ್ಟಿಸಿ ನೋಡಿದಳು. ನೋಡಿದವಳೆ 'ದೇವಲೋಕಾದಿಂದ ದೇವೇಂದ್ರತಾನೆ ಬಂದ, ಮಾಯಾಲೋಕಾದಿಂದ ಮಾದೇವ ತಾನೇ ಬಂದ ಸೋ ಎನ್ನಿರೆ, ಬೀಸೋ ಜ್ವಾಳಾದ ಮುಂದೆ ಬಸವ್ವ ತಾನೇ ಬಂದಳು ಸೋ ಎನ್ನಿರೇ" ಎಂದು ಏರುದನಿಯಲ್ಲಿ ಹುರುಳಿ ಬೀಸುತ್ತಾ ಮೈಮರೆತಿರುವಾಗಲೇ ಅಡುಗೆ ಮನೆಯಲ್ಲಿ ಮಜ್ಜಿಗೆ ಸಾರಿಗೆ ವಗ್ಗರಣೆ ಕೊಡುತ್ತಿದ್ದ ಬಸಮ್ಮವ್ವ ದಡಗ್ಗನೆದ್ದು "ಏನಪೇ ಈರಿ ಇದ್ಯಾವ್ಯಾಗ ಕಲಿತಿ. ಪದ ಬಲು ಬೇಸ್ರೈತೆ. ಈ ಪದ ಆಡಬಾಡಪೇ ಈರಿ. ನನಿಗೆ ಸಂಕಟ ಒಟ್ಟ್ಯಾಗ ತಾಳೀಸಿದಂಗಾಗತ್ರೈತೆ" ಎಂದು ಒಳಗಿನಿಂದಲೇ ಕೂಗುತ್ತಾ ಬಂದಳು. ಪದಕೇಳಿ ಯಾವಾಗಲೂ ಹೂವು ಅರಳಿದಂಗ ಅರಳಿ ಅನುಭವಿಸುತ್ತಿದ್ದ ಅವ್ವನ ಇವತ್ತಿನ ಈ ಮಾತು ಈರಮ್ಮನಿಗೆ ತಿರುಗಾಮುರುಗಾ ಅನಿಸಿ ಯಮ್ಮಂಗೆ ಪದ ಅಂದ್ರೆ ಪ್ರಾಣ ಬುಡ ಮನಿಸ್ಯಾಳು ನೀನು. 'ಇಂಗ್ಯಾಕ ಅಮ್‌ತೀಯಮ್ಮೋ ಇವತ್ತು, ನಾನು ಇಗಾ ಆ ಗ್ವಾಡೇಮ್ಯಾಗಳ ಫೋಟಾ ನೋಡಿ ಅಂಗೆ ಮುಗುಳಿ ಮೇಲೆ ಕುಂತಲ್ಲೆ ಹೊಸ ಪದ ಕಟ್ಟಿದ್ನೆಮ್ಮೊ. ನಿನಿಗೆ ಜಲುಮಕ್ಕ ಸುರ್ ಅಂದ್ರೆ ಆಡಾಕಲ್ಲ ಬುಡಮ್ಮಾ" ಅಂತ ಸೆರಗಿನ ತುದಿಯಲ್ಲಿ ಕಣ್ಣೊರೆಸಿಕೊಳ್ಳುತ್ತಾ ಮೌನಕ್ಕೆ ಜಾರಿದಳು. ಬೀಸೋಕಲ್ಲಲ್ಲಿ ಹುರುಳಿ ಹಾಗೆ ಉಳಿದಿದ್ದವು. ಮತ್ತೆ ಮನಸ್ಸು ತಿಬ್ಬರಿಸಿಕೊಂಡ ಈರಮ್ಮ" ಇವತ್ತು ಕೇಳೇ ಬುಡುಬೋಕು ಅವ್ವನನ್ನ. ಒಂದಿನನ್ನ ತಾತನ ಬಗ್ಗೆ ಕೇಳಿಲ್ಲ. ತಾತ ಯಾರಂಬದುಗುಡ ನಾವು ನೋಡಿಲ್ಲ" ಎಂದು ಮನಸಿನಲ್ಲಿದ್ದ ಧೈರ್ಯವನ್ನು ಬಾಯಿಗೆ ತಂದುಕೊಂಡು ಕೇಳಿಯೇ ಬಿಟ್ಟಳು.

ಬಸಮ್ಮವ್ವನ ಮೆದುಳು ಕಲಿಸಿದಂತಾಗಿ ಕಳೆದ ದಿನಗಳನ್ನು ಈರಮ್ಮನಿಗೆ, ಹೇಳೋದೇನಿದೆ ಆಗಿದ್ದು ಆಗಿ ಹೋಯಿತು. ಆಗಿದ್ದು ಅರ್ಧರಾತ್ರಿ ನೆನಪಿಸಿಕೊಂಡ್ರೆ ಅರ್ಧ ಆಯುಷ್ಯ ಕಮ್ಮಿ ಅಂತೆ ಅಂದುಕೊಂಡ ಅವ್ವ, ಮತ್ತೊಮ್ಮೆ ಶಾಂತವಾಗಿ ಗೋಡೆಯ ಆ ಫೋಟೋ ನೋಡಿ ಕಣ್ಣು ತುಂಬಿಕೊಂಡಳು. "ಈ ಪುಳ್ಳೇರಿಗನ್ನ ನನ್ನ ಬದುಕು ಗೊತ್ತಾಗ್ಲಿ" ಅಂತ, ಬಾಪೇ ಈರಿ, ಮಾಳಿ, ಗಾ ಆಕೆ ಮಲೆಮ್ಮನ್ನೂ ಕರಿ ಅಂದಳು ಅವ್ವ. ಬಸಮ್ಮವ್ವ ಭೂತಕಾಲದ ತಕ್ಕಡಿಯ ಪರಡಿಯೊಳಗೆ ಕುಂತವಳಂತೆ ಅಳೆದೂ ತೂಗಿ ಎರಡೂ ಕಣ್ಣು ಏಕಮಾಡಿ ಒಂದಿಷ್ಟು ವರ್ಷ ಹಿಂದಕ್ಕೆ ದೃಷ್ಟಿ ಹಾಯಿಸಿದಳು.

ಬಸಮ್ಮವ್ವ ಊರಾಗ ಸಣ್ಣವಳಿದ್ದಾಗ ಕೆಂಪಗ ತೊಂಡೆಹಣ್ಣಿನಂತ ಹುಡುಗಿ. ಅಪ್ಪ ವೀರಪ್ಪ ಸೌಕಾರ ಒಬ್ಬಳೇ ಮಗಳನ್ನು ಹೂವಿನ ತೇರಿನಂಗ ನೋಡಿಕೊಳ್ಳುತ್ತಿದ್ದ. ಯಾದಗಿರಿ ಕಡೆಯಿಂದ ಚನ್ನಬಸಪ್ಪನು ಯಳ್ಳಾರ್ತಿ ಸೀಮೆಕಡೆ ಎತ್ತುಗಳನ್ನು ಮಾರಲು ಬರುತ್ತಿದ್ದ. ಬಂದರೆ ಮೂರು ತಿಂಗಳು ಈಕಡೆಗೆ ಇರ್ತಿದ್ದ. ಆಗ ಆತ ನವಯುವಕ. ಹಣದಲ್ಲಿ, ಗುಣದಲ್ಲಿ ಮೇಲು. ಎತ್ತಿನ ವ್ಯಾಪಾರಕ್ಕೆ ಬಂದಾಗಲೆಲ್ಲ ವೀರಪ್ಪ ಸೌಕಾರನ ಮನೆಯಲ್ಲಿ ಉಂಡು ಅಲ್ಲೆ ಇನ್ನೊಂದು ಮನೆಯಲ್ಲಿ ವಾಸವಿರುತ್ತಿದ್ದ. ಇದನ್ನು ನೋಡಿ ಊರಾಗಿನ ಜನ "ಅಬಬಬ ವೀರಪ್ಪ ಸೌಕಾರ ಮಗಳಿಗೆ ಗೊಂಡು ಉಡುಕಂಗಿಲ್ಲ ಬುಡಪ್ಪ. ರೂಪವಂತ ಚಂಬಸಪ್ಪ ಗೌಡಗೆ ಕೊಡಾಕ ಪಿಲಾನ್ ಮಾಡಿದಂಗೈದಾನ. ಪಾಪ ಉಡುಗಿಯೇನು ಕಮ್ಮಿ ಐದಾಳ ಬುಡು ರಂಬಿ ಆಗೇಳ" ಅನ್ನುತ್ತಿದ್ದರು. ಊರಿನ ಬಾಯಿಗೆ ಇಲಿಕಿವಿ ಮಾಡಿಕೊಂಡು ತಾಯಿಯಿಲ್ಲದ ಬಸಮ್ಮನನ್ನು ಒಳ್ಳೆಯ ಗುಣವಂತನಿಗೆ ಕೊಟ್ಟು ಮದುವಿ ಮಾಡಬೇಕೆಂದು ಚನ್ನಬಸಪ್ಪನ ಊರುಕೇರಿ ಬಂಧು ಬಳಗ ಕೇಳದೆ ಮದುವೆ ಮಾಡಿಯೇ ಕೊಟ್ಟ.